E-AUCTION SALE NOTICE
M/S SHRI DIYA PROJECTS PRIVATE LIMITED

Regd. Off: No. 180, 1st Floor, 8th Cross, 14th Main Road, 6th Sector, HSR Layout, Bangalore, Karnataka, India-560102
Liquidator: AMARPAL
Corresponding address: Office no. 905, 9th Floor, Barton Centre, MG Road, Bengaluru, Karnataka- 560001
Email: cirp.shridiya@gmail.com Mobile No. 9717105008

SALE OF CORPORATE DEBTOR AS A GOING CONCERN UNDER REGULATION 32A OF INSOLVENCY & BANKRUPTCY BOARD OF INDIA (LIQUIDATION PROCESS) REGULATIONS, 2016

Date and Time of Auction	6th February, 2025 at 3:00 PM (IST) to 6:00 PM (IST) (With unlimited extension of 5 minutes each)
Last date of submission of EMD:	31st January, 2025 up to 5:00 PM (IST)
Last date for Submission of Eligibility Documents by prospective bidder	20th January, 2025 up to 5:00 PM (IST)

Sale of assets owned by M/s Shri Diya Projects Pvt. Ltd. (in Liquidation) bearing CIN No. U70109KA2010PTC055085 forming part of the Liquidation Estate appointed by the Hon'ble National Company Law Tribunal, Bengaluru Bench vide order dated 31.07.2024 (received on 08.08.2024)

ASSETS	Reserve Price	EMD Amount	Incremental Value
Project Name: SHRI DIYA ORNATE (As going concern)			
Shri Diya Ornate Divided in three different parts: 1. Sy No. 445 - measuring 1 Acre 05 Ghuntas 2. Sy No. 448/1 - measuring 2 Ghuntas 3. Sy No. 448/1 - measuring 01 Ghuntas Location of the Project:- Sarjapura Village, Sarjapura Hobli, Anekal Taluk, Bangalore, Karnataka	19,44,52,876.80	1,94,45,287.68	1.00 (in Lakhs) or multiple thereof

Terms and Conditions for the E-Auction Notice are as under:

1. E-Auction will be conducted as "AS IS WHERE IS" , "WHATEVER THERE IS BASIS" and "WITHOUT RECOURSE BASIS" through approved service provider i.e., https://baanknet.com/
2. This Sale Notice shall be read in conjunction with the Complete E-Auction Process Document containing details of the Assets online E-Auction Bid Form, Declaration and Undertaking Form, General Terms and Conditions of the E-Auction Sale which are available on **website https://shridiyacirp.in/ and Contact: Mr. Amarpal email id: cirp.shridiya@gmail.com or 9717105008.**
3. The intending bidders prior to submitting their bid should make their independent inquiries regarding the title of assets, if any aspect the assets at their own expenses and satisfy themselves.
4. The intending bidders are required to deposit Earnest Money Deposit (EMD) amount either through NEFT/RTGS in the accounts of "Shri Diya Projects Pvt Ltd in Liquidation" Bank Name: Standard Chartered Bank Account No. 52105902663, IFSC Code: SCBL0036033
5. The above auction is being done as going concern as directed by Hon'ble NCLT vide its order dated 31.07.2024 (received on 06.08.2024)

Mr. Amarpal
IBBI/IPA-001/IP-P-01584/2018-2019/12411
Liquidator of M/s Shri Diya Projects Pvt. Ltd.
AFA Valid Up to: 21.11.2024
Corresponding address: Office no. 905, 9th Floor, Barton Centre, MG Road, Bengaluru, Karnataka- 560001
Email id: cirp.shridiya@gmail.com

Date: 06.01.2025
Place: New Delhi

NOTICE
GLAXOSMITHKLINE PHARMACEUTICALS LIMITED
(Regd. Office: Dr. Annie Besant Road, Worli, Mumbai - 400030)

This is to inform the general public that Original Share Certificates issued by Glaxo Smith Kline Pharmaceuticals Limited, the details of which are as mentioned below, have been lost/misplaced and an application has been made by the holder for issuance of duplicate Share Certificates in respect thereof.

Name of the Holder: Ajoy Alex Mathew Folio No. 0126818

Certificate No.	Shares	Distinctive Nos. From	Distinctive Nos. To	Certificate No.	Shares	Distinctive Nos. From	Distinctive Nos. To
322767	50	17970526	17970575	799655	10	36820328	36820337
322768	25	17970576	17970600	799656	10	36820338	36820347
423962	17	28400613	28400629	799657	10	36820348	36820357
799653	50	36820268	36820317	799658	1	36820358	36820358
799654	10	36820318	36820327	799659	1	36820359	36820359

Any person who has a claim in respect of the said shares or objection to the issuance of the duplicate Share Certificate shall lodge such claim or objection with the Company at its Registered Office **within 15 (fifteen) days** from the publication of this notice or else the Company will proceed to issue duplicate Share Certificates in favor of the holder without any further delay.

Place : Mumbai
Date : 6th January 2025

Name of the Holder
Ajoy Alex Mathew

"IMPORTANT"

Whilst care is taken prior to acceptance of advertising copy, it is not possible to verify its contants. The Indian Express (P) Limited cannot be held responsible for such contents, nor for any loss or damage incurred as a result of transactions with companies, associations or individuals adversing in its newspapers or Publications. We therefore recommend that readers make necessary inquiries before sending any monies or entering into any agreements with advertisers or otherwise acting on an advertisement in any manner whatsoever.

NOTICE

This is to declare that I am B Sivarajan, son of Sivaswamy Balasubramaniam and my name is B Sivarajan in PAN and in Aadhaar is Sivarajan B. These refer to me only vide affidavit dated 15.6.2024 before notary Rajamani, Bangalore.
Date : 06.01.2025
Place : Bangalore

ABIDEEDICT PRIVATE LIMITED
CIN: U72501KA2018PTC119810

Registered Office at: Room No- 310, MIG B6, 3rd Floor, Surya Sethi Phase-1, Chandapura, Bengaluru, Karnataka, 560099, India

FORM No. INC-26
[Pursuant to rule 30 of the Companies (Incorporation) Rules, 2014]
Before the Regional Director, South-East Region, Hyderabad.

In the matter of the Companies Act, 2013, Section 13(4) of the Companies Act, 2013 and Rule 30(5) (a) of the Companies (Incorporation) Rules, 2014

AND

In the matter of Abideedict Private Limited having its Registered Office at Room No- 310, MIG B-6, 3rd Floor, Surya Sethi Phase-1, Chandapura, Bengaluru, Karnataka, 560099, India .....Petitioner

Notice is hereby given to the General Public that the Company proposes to make an application to the Central Government or Regional Director, South-East Region, Hyderabad under section 13 of the Companies Act, 2013 seeking confirmation of alteration of the Memorandum of Association of the Company in terms of the special resolution passed at the Extra-ordinary General Meeting held on 20th day of December, 2024 to enable the Company to change its Registered Office from the State of "**Karnataka**" to the State of "**Odisha**".

Any person whose interest is likely to be affected by the proposed change of the Registered Office of the Company may deliver **either on the MCA-21 portal (www.mca.gov.in) by filing an investor complaint form** or cause to be delivered or send by registered post of his/her objections supported by an affidavit stating the nature of his/her interest and grounds of opposition to the Regional Director, South-East Region, Hyderabad at 3rd Floor, Corporate Bhawan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad – 500 068, Telangana, India, within Fourteen Days of the date of publication of this notice with a copy to the Applicant Company at its Registered Office at the address mentioned below:

Abideedict Private Limited
Room No- 310, MIG B-6, 3rd Floor, Surya Sethi Phase-1, Chandapura, Bengaluru, Karnataka, 560099, India

For Abideedict Private Limited
Sd/-
Sukanta Kumar Sahoo
Director
DIN: 08476779

Date: 06-01-2025
Place:Bengaluru

பெரியகொடிவேரி தேர்வுநிலை பேரூராட்சி, ஈரோடு மாவட்டம்

ந.க.எண்.280/2024. **மறு ஒப்பந்தப்புள்ளி அறிவிக்கை** நாள்: 02.01.2025

ஈரோடு மாவட்டம், பெரியகொடிவேரி தேர்வுநிலை பேரூராட்சி 15வது நிதி ஆணையத்தின் 2024–2025ஆம் ஆண்டின் சுகாதார மானியத் திட்டத்தின் கீழ் கீழ்கண்ட வேலையினை செய்து முடிப்பதற்கு தகுதி வாய்ந்த ஒப்பந்தகாரர்களிடமிருந்து இணையதளம் வாயிலாக மறுஒப்பந்தப்புள்ளி கோரப்படுகிறது.

இணையதளம் வாயிலாக ஒப்பந்தப்புள்ளி படிவங்களை **10.01.2025ஆம் தேதி வெள்ளிக்கிழமை** முதல் **https://tntenders.gov.in** என்ற இணையதளத்திலிருந்து ஆன்லைன் மூலம் பதிவேற்றம் செய்யலாம். பதிவேற்றம் செய்பவர்கள் அட்டவணை கலம் எண்.4ல் கண்டுள்ள முன்வைப்புத் தொகையினை இணையதளம் வாயிலாக செலுத்தி **24.01.2025ஆம் தேதி வெள்ளிக்கிழமை பிற்பகல் 03.30 மணிக்குள்** இணையதளம் வாயிலாக ஒப்பந்தப்புள்ளி படிவங்களை சமர்ப்பிக்கப்பட வேண்டும். மேலும் பதிவேற்றம் செய்யப்பட்ட ஒப்பந்தப்புள்ளிகள் **24.01.2025 அன்று வெள்ளிக்கிழமை மாலை 04.30 மணிக்கு** பேரூராட்சியின் செயல் அலுவலர் அல்லது அவரது அதிகாரம் பெற்றவரால், நேரில் ஆஜராகி உள்ள ஒப்பந்ததாரர்கள் முன்னிலையில் தொழில்நுட்ப டெண்டர் (Technical Bid) திறக்கப்படும்.

15வது நிதி ஆணையம் – சுகாதார மானியத் திட்டம் 2024–2025

வ. எண்	பணியின் பெயர்	மதிப்பீடு தொகை ரூ.	செலுத்த வேண்டிய முன் வைப்பு தொகை ரூ.
1	2	3	4
1	வார்டு எண் 5, சர்வே எண் 57 டி.ஜி.புதூர் அரசு ஆரம்ப சுகாதார நிலையத்தில் புதிய கட்டிடம் கட்டுதல்	1,50,00,000/–	1,50,000/–

நிபந்தனைகள்

1. தமிழ்நாடு ஒளிவுமறைவற்ற ஒப்பந்தப்புள்ளி சட்டம் 1998 மற்றும் விதிகள் 2000ல் தெரிவிக்கப்பட்டுள்ள ஒப்பந்தப்புள்ளிகள் விதிமுறைகளை கடைபிடிக்கப்பட வேண்டும்.
2. ஒப்பந்தப்புள்ளி சம்பந்தப்பட்ட நிபந்தனைகள் மற்றும் இதர விவரங்கள் அலுவலக நாட்களில் அலுவலக நேரத்தில் நேரில் கேட்டு தெரிந்து கொள்ளலாம்.
3. ஒப்பந்தப்புள்ளியினை ஒத்தி வைக்கவோ, ரத்து செய்யவோ செயல் அலுவலருக்கு முழு அதிகாரம் உண்டு.
4. ஒப்பந்தபுள்ளிகள் பேரூராட்சி மன்றத்தின் அங்கீகாரத்திற்கு உட்பட்டது.

(மும்) திரு. க.தமிழ்கள்சிவா,
தலைவர்,
பெரியகொடிவேரி பேரூராட்சி. ஈரோடு மாவட்டம்.

செ.ம.தொ.இ/033/ஒப்பந்தப்புள்ளி/2025

(மும்) திரு. அ.சரவணன்,
செயல் அலுவலர்,
பெரியகொடிவேரி பேரூராட்சி. ஈரோடு மாவட்டம்.

ORIX LEASING & FINANCIAL SERVICES INDIA LIMITED

(formerly known as OAIS Auto Financial Services Limited) (A Subsidiary of ORIX Auto Infrastructure Services Limited)
Regd. Office : Plot No. 94, Marol Co-operative Industrial Estate, Andheri-Kurla Road, Andheri (E), Mumbai - 400 059
Tel.: + 91 22 2859 5093 / 6707 0100 | Fax: +91 22 2852 8549
Email: info@orixindia.com | www.orixindia.com | CIN: U74900MH2006PLC163937

APPENDIX- IV-A [See proviso to rule 8(6)]
NOTICE FOR SALE OF IMMOVABLE PROPERTIES

Public Notice for auction sale of Immovable Assets under the Securitization and Reconstruction of Financial Assets and Enforcement of Security Interest Act, 2002 read with proviso to Rule 8 (6) of the Security Interest (Enforcement) Rules, 2002.
Notice is hereby given to the public in general and in particular to the Borrower (s) and Guarantor (s) that the below described immovable property mortgaged/charged to the Secured Creditor, the physical possession of which has been taken by the Authorised Officer of the Secured Creditor i.e., Orix Leasing & Financial Services India Ltd. will be sold through public auction on "AS IS WHERE IS", "AS IS WHAT IS" and "WHATEVER THERE IS BASIS" on **27.01.2025** for recovery of amount as mentioned herein below due to Orix Leasing & Financial Services India Ltd. from borrowers and co-borrowers as mentioned herein below. The Reserve Price and the Earnest Money Deposit (EMD) will be as mentioned herein below.

NAME OF THE BORROWERS AND CO-BORROWERS OUTSTANDING AMOUNT DEMAND NOTICE DATE	DETAILS OF PROPERTY	RESERVE PRICE (INR) EMD BID INCREASE AMOUNT
• M/s Generation System • Mohamed Aleem • Aysha Parveen INR 1,23,50,083.58/- AS ON 16-12-2024 Demand Notice Date: 11-03-2020	Land And Building Flat Measuring 975 Sq. Ft. Bearing No.f-1 (as Per Property Records Old No 24/b9, New 82/19) In Fourth Floor Of The Building Known As & Sakthy Apartments & Together With An Undivided 200 Sq. Ft. Share In The Land Measuring 3847 Sq.ft., Comprised In T.s No. 51/3, Block No. 36, Mambalam Village, Bearing Old Door No. 131/1, Thereafter 24, Presently 82, East Jones Road And Bearing Old Door No 36/1, New No 12, Soodiammanpet Street, Mambalam- 600015, And Land **Bounded On The: East By:** Door No. 25-East Jones Road, **West By**: Door No. 23-East Jones Road, **North By:** Soodiammanpet Street, South By: East Jones Road	INR 34,50,000/- (Rupees Thirty Four Lakh Fifty Thousand Only) Earnest Money Deposit 10% INR 3,45,000/- (Rupees Three Lakh Forty Five Thousand Only) Bid Increment Amount 50,000/- (Fifty Thousand Only)
• Rathna Bai G • M/s Raj Prabha Associates • Govindarajan INR 1,14,63,464.54/- AS ON 16-12-2024 Demand Notice Date: 17-02-2023	Flat No. A-2, (as Per Property Tax Record No. 5), In The Second Floor Measuring 925 Sq. Ft., Together With An Undivided 363.96 Sq. Ft. Share In The Land Measuring 1800 Sq. Ft., Comprised In T.s. No. 5301, Block No. 120, Theyagaraya Village, Bearing Old Door No. 14, New No. 33, Nathamuni Street, T. Nagar, Chennai-600017, And **Bounded On The: North:** Natahmuni Street In T.s. No. 529, **South:** Property Of Venkatachari And Duraisamy Iyengar (t.s. No. 5314), **East:** Door No. 30 (T.S. No. 5301), **West:** Door No. 31 Part Belonging To Neelakandan (T.S. No. 5301/2), The Said Property Situated Within The Sub Registration District Of T. Nagar And Registration District Of South-chennai	INR 65,00,000/- (Rupees Sixty Five Lakh Only) Earnest Money Deposit 10% INR 6,50,000/- (Rupees Six Lakh Fifty Thousand Only) Bid Increment Amount 50,000/- (Fifty Thousand Only)

For detailed terms and conditions of the sale, please refer to the link provided in the website of Orix Leasing & Financial Services India Ltd., i.e. Https://www.orixindia.com/leasing.php

Sd/-
Authorised Officer
Date: 04.01.2025 **Orix Leasing & Financial Services India Ltd.**



NELAMANGALA MAIN BRANCH, # 1242,
Dwaraka Plaza, B.H. Road, Nelamangala, Bangalore (R)-562133

PUBLIC NOTICE FOR E-AUCTION FOR SALE OF MOVABLE ASSETS/VEHICLES

Sale of Movable asset hypothecated to Bank ,Whereas, the Authorized Officer of Bank of Baroda had taken possession of the following vehicles pursuant to the notice issued in the following loan accounts with right to sell the same on **"AS IS WHERE IS BASIS" and "AS IS WHATEVER IS"** basis for realization of Bank's dues plus interest as detailed hereunder and whereas consequent upon failure to repay the dues, the undersigned in exercise of power proposes to realize the Bank's dues by sale of the said vehicles. The sale will be done by the undersigned through e-auction platform provided at the website.

Sr /Lot No.	Name & address of Borrower/s / Guarantor/ Mortgagor s	Give short description of the movable property with known encumbrances, if any (Mortgaged by	Total Dues.	Date of e-Auction Time of E-auction - Start Time to End Time	1.Reserve Price- 2.Earnest Money Deposit (EMD) 3.Bid Increase Amount	Status of Possession (Constructive /Physical)	Property Inspection date & Time.
1	**M/s PRATHIBHA TRANS LOGISTICS** 91/4D, Thimmegowda Building Behind ICICI Bank ATM, Alur Main Road, Makali Post Dasanapura Hobli, Bangalore, Karnataka- 562162	**TATA LPT 2823 CR BS VI VEHICLE REGISTRATION NUMBER - KA 51 AJ 3752**	**Rs. 35,34,288.28/-** As on 23.09.2024 And Further Interest From 24.09.2024 Along With Applicable Costs And Other Charges	**22-01-2025 FROM 2.00 PM TO 6.00 PM**	**1. Rs.16,09,688/- 2. Rs.1,60,969/- 3. Rs.5000/-**	**PHYSICAL**	**From 06.01.2025 To 20-01-2025 From 10.00 Am To 04.00 Pm At Shriram Automall India Limited, Village-Vinola, Manesar, Gurgaon, Haryana With Prior Permission**
2	**M/s PRATHIBHA TRANS LOGISTICS** 91/4D, Thimmegowda Building Behind ICICI Bank ATM, Alur Main Road, Makali Post Dasanapura Hobli, Bangalore, Karnataka- 562162	**TATA LPT 2823 CR BS VI REGISTRATION NUMBER - KA 51 AJ 3753**	**Rs. 35,34,288.28/-** As on 23.09.2024 And Further Interest From 24.09.2024 Along With Applicable Costs And Other Charges	**22-01-2025 FROM 2.00 PM TO 6.00 PM**	**1. Rs.16,09,688/- 2. Rs.1,60,969/- 3. Rs.5000/-**	**PHYSICAL**	**From 06.01.2025 To 20-01-2025 From 10.00 Am To 04.00 Pm At Shriram Automall India Limited, Village-Vinola, Manesar, Gurgaon, Haryana With Prior Permission**
3	**M/s PRATHIBHA TRANS LOGISTICS** 91/4D, Thimmegowda Building Behind ICICI Bank ATM, Alur Main Road, Makali Post Dasanapura Hobli, Bangalore, Karnataka- 562162	**TATA LPT 2823 CR BS VI REGISTRATION NUMBER - KA 51 AJ 3755**	**Rs. 35,34,288.28/-** As on 23.09.2024 And Further Interest From 24.09.2024 Along With Applicable Costs And Other Charges	**22-01-2025 FROM 2.00 PM TO 6.00 PM**	**1. Rs.16,09,688/- 2. Rs.1,60,969/- 3. Rs.5,000/-**	**PHYSICAL**	**From 06.01.2025 To 20-01-2025 From 10.00 Am To 04.00 Pm At Shriram Automall India Limited, Village-Vinola, Manesar, Gurgaon, Haryana With Prior Permission**

For detailed terms and conditions of sale, please refer/visit to the website link **https://www.bankofbaroda.in/e-auction** and online auction portal **Baanknet.com**. Also, prospective bidders may contact the Authorised officer on Tel No. _____ Mobile **9745088061**

Date: 04-01-2025, Place: Bangalore **Authorised Officer, Bank of Baroda**

Kotak Mahindra Bank Limited

Registered Office :- 27 BKC, C 27, G Block, Bandra Kurla Complex, Bandra (E), Mumbai-400051.
Branch Office : No. 22, Kotak House, M G Road, Bangalore - 560001.

POSSESSION NOTICE (For immovable property)

(As per Appendix IV read with Rule 8 (1) of the Security Interest (Enforcement) Rules, 2002)

WHEREAS, The undersigned being the Authorized Officer of KOTAK MAHINDRA BANK LIMITED, a banking company within the meaning of the Banking Regulation Act, 1949 having it's Registered Office at 27BKC, C 27, G Block, Bandra Kurla Complex, Bandra (E), Mumbai – 400 051 and branch office at Kotak Mahendra Bank Ltd, No. 22, Kotak House, M G Road, Bangalore – 560001, under the Securitization and Reconstruction of Financial Assets and Enforcement of Security Interest Act, 2002 and in exercise of powers conferred under Section 13 (2) read with rule 9 of the Security Interest (Enforcement) Rules, 2002 issued a demand notice, to repay the amount mentioned in the notice within 60 days from the date of receipt of the said notice. The Details of the Parties along with Mortgaged Property Possession taken by the Bank, is given below:-

Name of Customer (Borrower(s) / Co-Borrower(s) and Guarantor(s)) along Loan Account Nos	Date of Demand Notice u/s 13(2) read with rule 9 of SARFAESI Act. Along with Amount in Rs.	Description of Immovable Property taken in to Possession (As per Appendix IV read with Rule 8 (1) of the Security Interest (Enforcement) Rules, 2002)	Date of Possession
LOAN ACCOUNT: BBA_WC 5348474292 (CRN 753727327) **1. M/s. Bestool Manufacturing Private Limited** **Represented by : Mr Babulal M Shiradhana,** No 40. Muthachari Industrial Estate, Mysore Road,Nayandanahalli Bangalore - 560039 **.... (Borrower)** **2. Mr. Babulal M Shiradhana,** No 307, Sri Ravi Enclave, Sapthagiri Residency, Muthurayana, Bangalore Viswavidyalaya, Bangalore – 560056. **... (Co- Borrower/ Guarantor)** **3. Mr. Madanlal Shiradhana,** No 656, 10th Main Road, Near RPC Layout Bus Stand, RPC Layout, Hampinagara Bangalore – 560104 Also At:**Mr. Madanlal Shiradhana,** No 40. Muthachari Industrial Estate, Mysore Road, Nayandanahalli Bangalore - 560039 **...(Co-Borrower/ Guarantor)** **4. Mrs Kasturi Devi,** No 656, 10th Main Road, Near RPC Layout Bus Stand, RPC Layout, Hampinagara Bangalore – 560104 Also At: **Mrs Kasturi Devi,** Site Nos 39 & 40, Khata No 50/1, Nayandanahalli Village, Kengeri Hobli, Ward No 39, Bangalore – 560039 **Mrs Kasturi Devi,** No 40. Muthachari Industrial Estate, Mysore Road,Nayandanahalli Bangalore - 560039....**(Co-Borrower/ Guarantor)**	**Demand Notice Date: : 24-10-2024** Rs. 75,55,490.14 (Rupees Seventy Five Lakh Fifty Five Thousand Four Hundred Ninety and Paisa Fourteen Only) **as on 22-10-2024**	All the piece and parcel of the vacant sites bearing No 39 and 40 of Nayandanahalli Village, Khata No 50/1, situated at Nayanadnahalli Village, Bangalore South Taluk, presently under BBMP limits, measuring East to West 40 Feet and North to South 60 Feet and bounded on **East By:** Road, **West By:** Property No 45 belonging to J K Sab, **North By:** Property NO 41 Belonging to Anwar **South By:** Property No 38 together with all existing buildings and structures thereon and building and Structures as may be erected / Constructed there upon any time from / after the date of respective mortgages and all addition thereto and all fixtures and furniture's and plant and machinery attached to the earth or parentally fastened to anything attached to the earth, both present and future.	**02-01-25**
LOAN ACCOUNT: BBA_WC 217011017961 (CRN 36588641) **1. M/S. B M Steel Trading & Company** **Represented by Its Proprietor : Mr Aslam Khan,** No 32/12/1, Muneshwara Layout, Old Mangammanapalya Road, Opp Oxford Dental College, Hosuru Main Road, Bangalore Urbun - 560068 **..... (Borrower)** **2. Mr Aslam Khan,** No 8/B, G Cross, 3rd Main Road, Bismillanagar, Bangalore - 560029 **Also At: Mr Aslam Khan,** Flat No 414, 3rd Floor, JR Mark Woods, Sy No 23/1, Yallukunte Village, Begur Hobli, Bangalore – 560068 .... **(Co- Borrower/ Guarantor)** **3. Mr Arshad Khan,** No 8/B, G Cross, 3rd Main Road, Bismillanagar, Bangalore - 560029 Also at; **Mr Arshad Khan,** Flat No 414, 3rd Floor, JR Mark Woods, Sy No 23/1, Yallukunte Village, Begur Hobli, Bangalore – 560068....**(Co-Borrower/ Guarantor)** **4. Mrs Salma Khanum,** No 8/B, G Cross, 3rd Main Road, Bismillanagar, Bangalore - 560029 **Also at: Mrs Salma Khanum,** Flat No 414, 3rd Floor, JR Mark Woods, Sy No 23/1, Yallukunte Village, Begur Hobli, Bangalore – 560068 ....**(Co-Borrower/ Guarantor)**	**Demand Notice Date: : 23-10-2024** Rs. 50,56,438.19 /- (Rupees Fifty Lakh Fifty Six Thousand Four Hundred Thirty Eight and Paisa Nineteen Only) **as on 22-10-2024**	**Schedule A Property - (Description of the entire property):** All the piece and parcel of the property bearing Survey No 23/1, Measuring 39.5 guntas, situated at Yallukunte Village, Begur Hobli, Bangalore South Taluk, the said property was duly converted for residential purpose, vide DC order No ALN (S) SR218/2005-06, dated 18-03-2006 and bounded **East By:** Property belongs to Narayana Reddy; **West By:** Property belongs to K B Jayaram Reddy and his family members; **North By:** Private Property; **South By:** Road and remaining land in Sy No 23/1 retained by owner. **Schedule B Property:** All the piece and parcel of the property bearing Flat No 414, in third floor, in apartment known as "JR MAK WOODS" having super built up area of 1812 Sq Fts, three BHK Flat, vitrified flooring and RCC Roofed, along with one covered car parking constructed on A Schedule property. **Schedule C Property:** And undivided share, right, title and interest in Schedule A property measuring to an Extent of 736.98 Sq Ft	**02-01-2025**

The Borrowers having failed to repay the amount, notice is hereby given to the Borrowers and the public in general that the undersigned has taken possession of the property described herein below in exercise of powers conferred on him under Section 13 (4) of the said Act read with Rule 9 of the said rules on the date as mentioned above in "Date of Possession" Colum.
The Borrowers mentioned herein above in particular and the public in general is hereby cautioned not to deal with the property and any dealing with the property will be subject to charge of **KOTAK MAHINDRA BANK LIMITED,** for an amount as mention in this notice, along with future interest at contractual rate and substitute interest, incidental expenses, costs and charges etc. due w.e.f. the very next date of the status of outstanding amount date showing in the above mention details, till the date of full repayment and/ or realization. Further the borrower's attention invited to provisions of sub-section (8) of section 13 of the Act, in respect of time available to redeem the secured assets.
Please note description of properties is as mentioned above.

Date: 06-01-2025 **Sd/- (Authorised Officer)**
Place: Bangalore **Kotak Mahindra Bank Limited**

ಸಮಾಚಾರ ಸಣ್ಣದಲ್ಲ

ಪರೀಕ್ಷೆಗಳಿಗೆ ತರಬೇತಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಎಸ್‌ಬಿಐ ಮತ್ತು ಇತರ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲು ನಿರ್ಧರಿಸಿದೆ. ಆಸಕ್ತರು ಜನವರಿ 8 ರೊಳಗಾಗಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಪ್ರಕಟಣೆಯಲ್ಲಿ ತಿಳಿಸಿದೆ.

ಯುವನಿಧಿ ವಿಶೇಷ ನೋಂದಣಿ ಅಭಿಯಾನ

ಬೆಂಗಳೂರು: ಯುವನಿಧಿ ಯೋಜನೆಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹ ಅಭ್ಯರ್ಥಿಗಳು ನೋಂದಾಯಿಸುವಂತಾಗಲು ಜ.06 ರಿಂದ 20 ರವರೆಗೆ ಯುವ ನಿಧಿ ವಿಶೇಷ ನೋಂದಣಿ ಅಭಿಯಾನ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಅಂಗೀಕೃತ ವಿಶ್ವವಿದ್ಯಾಲಯ ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಹಮ್ಮಿಕೊಳ್ಳಲಾಗಿದೆ. 2023 ಹಾಗೂ 2024ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮೊ ತೇರ್ಗಡೆಯಾದ ಅಭ್ಯರ್ಥಿಗಳು ಈ ಅಭಿಯಾನದ ಪ್ರಯೋಜನ ಪಡೆದುಕೊಳ್ಳಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದೆ. ಮಾಹಿತಿಗಾಗಿ https://nad.karnataka.gov.in ಸಂಪರ್ಕಿಸಿ.

ತಾಯಿಯನ್ನು ಕೊಂದು ಮಗ ಆತ್ಮಹತ್ಯೆಗೆ ಶರಣು

ಬೆಂಗಳೂರು: ತಾಯಿಯನ್ನು ಕೊಂದು ಬಳಿಕ ಮಗನೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಸೂರ್ಯಸಿಟಿ ಸಮೀಪದ ಹಳೆ ಚಂದಾಪುರದಲ್ಲಿ ನಡೆದಿದೆ. ಚಂದಾಪುರದಲ್ಲಿ ವಾಸಿಸುತ್ತಿದ್ದ ತಾಯಿ ಮಹಾಲಕ್ಷ್ಮಿ (41) ಕೊಲೆಯಾದವರು, ಕೃತ್ಯ ನಡೆಸಿದ ಪುತ್ರ ರಮೇಶ್ (21) ಆತ್ಮಹತ್ಯೆಗೆ ಶರಣಾಗಿದ್ದಾನೆ. ಚಿತ್ರದುರ್ಗ ಮೂಲದ ಚಳ್ಳಕೆರೆಯ ಚಿಕ್ಕಹಳ್ಳಿ ಕುಟುಂಬ, ಕಳೆದ ಕೆಲ ವರ್ಷಗಳ ಹಿಂದೆ ಕೆಲಸ ಅರಸಿಕೊಂಡು ಬಂದಿದ್ದರು. ಸ್ಥಳಕ್ಕೆ ಸೂರ್ಯನಗರ ಪೊಲೀಸರ ಮತ್ತು ಗ್ರಾಮಾಂತರ ಎಸ್‌ಪಿ ನಾಗೇಶ್ ಕುಮಾರ್ ಭೇಟಿ ಪರಿಶೀಲನೆ ನಡೆಸಿದ್ದಾರೆ. ಮೃತ ದೇಹಗಳನ್ನು ಅತ್ತಿಬೆಲೆ ಆಕ್ಸ್‌ಫರ್ಡ್ ಆಸ್ಪತ್ರೆಗೆ ರವಾನಿಸಲಾಗಿದೆ. ಕುಟುಂಬ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಮಗ ಕುಡಿದು ಬಂದು ಆಗಾಗ್ಗೆ ಗಲಾಟೆ ಮಾಡುತ್ತಿದ್ದ. ಶನಿವಾರ ರಾತ್ರಿಯೂ ಕುಡಿದು ಬಂದು ತಾಯಿ ಜತೆ ಗಲಾಟೆ ಮಾಡಿದ್ದ. ಗಲಾಟೆ ವಿಕೋಪಕ್ಕೆ ತಿರುಗಿ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಮೊಬೈಲ್ ಚಾರ್ಜಿಂಗ್ ವೈರ್‌ನಿಂದ ಕುತ್ತಿಗೆಗೆ ಬಿಗಿದು ತಾಯಿ ಹತ್ಯೆ ಮಾಡಿದ್ದಾನೆ. ಬಳಿಕ ತಾನು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಆಟೋ ದರ ಏರಿಕೆಗೆ ಚಾಲಕರ ಮನವಿ

ಬೆಂಗಳೂರು: ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಏರಿಕೆಯ ಬೆನ್ನಲ್ಲೇ ಇದೀಗ ಆಟೋರಿಕ್ಷಾ ಪ್ರಯಾಣ ದರ ಕೂಡ ಏರಿಕೆ ಮಾಡಬೇಕೆಂದು ಕೆಲ ಆಟೋ ಚಾಲಕ ಸಂಘಟನೆಗಳು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಮನವಿ ಮಾಡಿವೆ. ಸಾರಿಗೆ ನಿಗಮಗಳ ನಷ್ಟ ತುಂಬಿಸಲು ರಾಜ್ಯ ಸರಕಾರ ಬಸ್ ಟಿಕೆಟ್ ಪ್ರಯಾಣ ದರವನ್ನು ಏಳು ರುಪಾಯಿ ಯಿಂದ 115 ರವರೆಗೆ ದರ ಏರಿಕೆ ಮಾಡಿದೆ.ಈ ನಡುವೆ ಆಟೋರಿಕ್ಷಾ ಪ್ರಯಾಣದ ದರವನ್ನು ಏರಿಸುವಂತೆ ಮನವಿ ಮಾಡಿದ್ದಾರೆ. ಆಟೋರಿಕ್ಷಾ ಪ್ರಯಾಣ ದರ 1 ಕಿಲೋ ಮೀಟರ್‌ಗೆ ಐದು ರುಪಾಯಿ, 2 ಕಿಲೋಮೀಟರ್‌ಗೆ 10 ರುಪಾಯಿ ಏರಿಕೆ ಮಾಡುವಂತೆ ಮನವಿ ಮಾಡಿವೆ. ದರ ಏರಿಕೆ ಸಂಬಂಧ ಇದೇ ತಿಂಗಳ 3ನೇ ವಾರದಲ್ಲಿ ಸಭೆ ನಡೆಯಲಿದ್ದು, ಪ್ರಯಾಣದ ದರ ಏರಿಕೆ ಬಗ್ಗೆ ಈ ಸಭೆಯಲ್ಲಿ ತೀರ್ಮಾನ ಆಗಲಿದೆ. ಸಭೆಯಲ್ಲಿ ಜಿಲ್ಲಾಧಿಕಾರಿ-ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷ, ಆರ್‌ಟಿಒ ಕಚೇರಿಯ ಅಧಿಕಾರಿ- ಕಾರ್ಯದರ್ಶಿ ಹಾಗೂ ಟ್ರಾಫಿಕ್ ಡಿಸಿಪಿ, ಗ್ರಾಹಕರ ವೇದಿಕೆಯಿಂದ ಅಧಿಕಾರಿ ಕಮಿಟಿ ಸದಸ್ಯರು ಇರಲಿದ್ದಾರೆ.

ಐಪಿಎಸ್‌ಗಳ ಆಪರೇಷನ್ ಸದ್ಯಕ್ಕೆ ಸ್ಥಗಿತ | ರೇಸ್‌ನಲ್ಲಿದ್ದ ಅಧಿಕಾರಿಗಳಿಗೆ ಶಾಕ್

ಪೊಲೀಸ್ ಆಯುಕ್ತರ ಬದಲಾವಣೆ ನಿರ್ಧಾರ ಕೈ ಬಿಟ್ಟ ರಾಜ್ಯ ಸರಕಾರ

● ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ತೀರಾ ತೆರೆಮರೆಯಲ್ಲಿ ಲಾಬಿ ಜರುಗುತ್ತಿದ್ದ ಬಹು ನಿರೀಕ್ಷಿತ ಬೆಂಗಳೂರು ನಗರ ಪೊಲೀಸ್ ಆಯುಕ್ತರ ವರ್ಗಾವಣೆ ಪ್ರಕ್ರಿಯೆ ದಿಢೀರ್ ಸ್ಥಗಿತಗೊಂಡಿದೆ.

ಸಂಪ್ರದಾಯ ಎನ್ನುವಂತೆ ಪ್ರತಿ ವರ್ಷ ಡಿಸೆಂಬರ್ ವೇಳೆಗೆ ವರ್ಗಾವಣೆ ಯಾಗುತ್ತಿದ್ದ ಬೆಂಗಳೂರು ಮಹಾನಗರ ಪೊಲೀಸ್ ಆಯುಕ್ತ ದಯಾನಂದ್ ಎಂದಿನಂತೆ ಮುಂದುವರಿದಿದ್ದಾರೆ. ಅಷ್ಟೇ ಅಲ್ಲ ಮುಂದಿನ ಏಪ್ರಿಲ್ ವರೆಗೂ ಅವರು ಮುಂದುವರಿಯುವ ಎಲ್ಲಾ ಸಾಧ್ಯತೆಗಳು ನಿಚ್ಚಳವಾಗಿವೆ. ಇದರೊಂದಿಗೆ ದಯಾನಂದ ಅವರು ಹಿಂದಿನ ಪೊಲೀಸ್ ಆಯುಕ್ತ ಕಮಲ್ ಪಂತ್ ಅವರ ಮಾದರಿ ಒಂದು ವರ್ಷಕ್ಕೂ ಹೆಚ್ಚಿನ ಸಮಯ ಆಯುಕ್ತರಾಗಿ ಮುಂದುವರಿದಂತಾಗಿದೆ.

ಅಲ್ಲದೆ ನಗರ ಪೊಲೀಸ್ ಆಯುಕ್ತರ ಹುದ್ದೆಗಾಗಿ ಸರಕಾರದ ಉನ್ನತ ಮಟ್ಟದಲ್ಲಿ ತಮ್ಮದೇ ಆದ ರೀತಿಯಲ್ಲಿ ಪ್ರಯತ್ನ ನಡೆಸುತ್ತಿದ್ದ ಅನೇಕ ಹಿರಿಯ ಐಪಿಎಸ್ ಅಧಿಕಾರಿಗಳಿಗೆ ತಾತ್ಕಾಲಿಕವಾಗಿ ನಿರಾಶೆಯಾದಂತಾಗಿದೆ. ಮೂಲಗಳ ಪ್ರಕಾರ ಏಪ್ರಿಲ್ ವೇಳೆಗೆ ಕೆಲವು ಐಪಿಎಸ್ ಅಧಿಕಾರಿಗಳ ಬಡ್ತಿ ಹಾಗೂ ನಿವೃತ್ತಿ ಆಗಲಿದ್ದು, ಆ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತರನ್ನೂ ಬದಲಾವಣೆ ಮಾಡುವ ಸಾಧ್ಯತೆ ಇದೆ. ಅಲ್ಲಿಯವರೆಗೂ ದಯಾನಂದ ಅವರನ್ನೇ ಮುಂದುವರಿಸಲು ಸರಕಾರ ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ.

ಸರಕಾರದ ಮಟ್ಟದಲ್ಲಿನ ಈ ಬೆಳವಣಿಗೆಯಿಂದ ಕೆಲವು ಐಪಿಎಸ್ ಅಧಿಕಾರಿಗಳು ಆಯುಕ್ತರ ಹುದ್ದೆಯ ರೇಸ್ ನಿಂದ ಹಿಂದೆ ಸರಿದಿದ್ದು ಕೆಲವರು ಇನ್ನೂ ಲಾಬಿ ಮುಂದುವರಿಸಿದ್ದಾರೆ ಎನ್ನಲಾಗಿದೆ. ಆದರೆ ಅಪಾರ ಒತ್ತಡಗಳ ನಡುವೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯುಕ್ತರ ಬದಲಾವಣೆ ವಿಚಾರವನ್ನು ಸದ್ಯಕ್ಕೆ ಪ್ರಸ್ತಾಪ ಮಾಡುವುದೇ ಬೇಡ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ರೇಸ್‌ನಲ್ಲಿ ಯಾರಿದ್ದರು, ಏನಾಯ್ತು ?

ರಾಜ್ಯ ಕಾನೂನು ಸುವ್ಯವಸ್ಥೆ ಮುಖ್ಯಸ್ಥ ಆರ್.ಹಿತೇಂದ್ರ, ಸಿಐಡಿ ಮುಖ್ಯಸ್ಥ ಬಿ.ಕೆ.ಸಿಂಗ್ , ಬಿಎಂಟಿಎಫ್ ಮುಖ್ಯಸ್ಥ ಸೀಮಂತ್ ಕುಮಾರ್ ಸಿಂಗ್, ವಾರ್ತಾ ಇಲಾಖೆ ಆಯುಕ್ತರು ಹಾಗೂ ರಾಜ್ಯ ಗುಪ್ತಚರ ವಿಭಾಗದ ಮುಖ್ಯಸ್ಥ ಹೇಮಂತ್ ನಿಂಬಾಳ್ಕರ್, ರಾಜ್ಯ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಮುಖ್ಯಸ್ಥ ಅರುಣ್ ಚಕ್ರವರ್ತಿ, ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥ ಶರತ್ ಚಂದ್ರ, ಅಪರಾಧ ವಿಭಾಗದ ಮುಖ್ಯಸ್ಥ ಹರಿಶೇಖರನ್ ಹಾಗೂ ಗೃಹ ಇಲಾಖೆ ಕಾರ್ಯದರ್ಶಿ ರವಿ ಸೇರಿದಂತೆ ಅನೇಕ ಅಧಿಕಾರಿಗಳು ರೇಸ್ ನಲ್ಲಿ ಇದ್ದಾರೆ. ಇವರಲ್ಲಿ ಬಿ.ಕೆ.ಸಿಂಗ್ , ಹಿತೇಂದ್ರ ಹಾಗೂ ಹೇಮಂತ್ ನಿಂಬಾಳ್ಕರ್ ಅವರನ್ನು ನೇಮಕ ಮಾಡುವ ಸಾಧ್ಯತೆ ಬಗ್ಗೆ ಸರಕಾರ ಹೆಚ್ಚು ಆಸಕ್ತಿ ವಹಿಸಿತ್ತು. ಅದರಲ್ಲೂ ಬಿ.ಕೆ. ಸಿಂಗ್ ಅವರನ್ನು ನೇಮಕ ಮಾಡಲು ಸರಕಾರ ಬಹುತೇಕ ನಿರ್ಧಾರ ಮಾಡಿದೆ ಎನ್ನುವ ಮಟ್ಟಿಗೆ ಚರ್ಚೆ ನಡೆಯುತ್ತಿತ್ತು. ಆದರೆ ಸರಕಾರ ಎಲ್ಲಾ ಪ್ರಕ್ರಿಯೆಗಳು ಸ್ಥಗಿತಗೊಂಡಿವೆ ಎಂದು ತಿಳಿದುಬಂದಿದೆ.

ನಿರ್ಧಾರ ದಿಢೀರ್ ಬದಲಾಗಿದ್ದೇಕೆ?: ಹಿರಿಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರನ್ನು ಸಾಮಾನ್ಯವಾಗಿ ಬೆಂಗಳೂರು ಮಹಾನಗರ ಪೊಲೀಸ್ ಆಯುಕ್ತರನ್ನಾಗಿ ನೇಮಿಸಲಾಗುತ್ತದೆ. ಪ್ರತಿ ವರ್ಷ ಡಿಸೆಂಬರ್ ವೇಳೆಗೆ ಐಪಿಎಸ್ ಅಧಿಕಾರಿಗಳಿಗೆ ಬಡ್ತಿ ನೀಡುವ ಸಂದರ್ಭದಲ್ಲಿ ಆಯುಕ್ತರ ಬದಲಾವಣೆ ಆಗುತ್ತದೆ. ಇದು ಒಂದು ರೀತಿಯ ಸಂಪ್ರದಾಯದಂತೆ ನಡೆದುಕೊಂಡು ಬಂದಿದೆ.

ಹೀಗಾಗಿ ಬೆಂಗಳೂರು ಪೊಲೀಸ್ ಆಯುಕ್ತರ ಅವಧಿ ಒಂದು ವರ್ಷ ಎನ್ನುವುದು ಸಾಮಾನ್ಯ ನಂಬಿಕೆ ಎನ್ನುವಂತಾಗಿದೆ. ಆದರೂ ಈ ಹಿಂದೆ ಹಿರಿಯ ಪೊಲೀಸ್ ಅಧಿಕಾರಿಗಳಾದ ಶಂಕರ ಬಿದರಿ ಅವರು ಮೂರು ವರ್ಷಗಳ ಅವಧಿಗೆ, ಕಮಲ್ ಪಂತ್ ಅವರು ಎರಡು ವರ್ಷಗಳ ಅವಧಿಗೆ ಆಯುಕ್ತರಾಗಿದ್ದರು.

ಅದರ ಮುಂದುವರಿದ ಭಾಗವಾಗಿ ಈಗ ದಯಾನಂದ್ ಒಂದೂವರೆ ವರ್ಷದಿಂದ ಆಯುಕ್ತರಾಗಿದ್ದಾರೆ. ಅಷ್ಟಕ್ಕೂ ದಯಾನಂದ್ ಅವರನ್ನು ಏಕೆ ಮುಂದುವರಿಸುತ್ತಿದೆ ಎಂದು ನೋಡಿದರೆ ಮುಖ್ಯಮಂತ್ರಿ ಅವರ ಆಪ್ತ ವಲಯದಲ್ಲಿ ಸಾಕಷ್ಟು ಕಾರಣಗಳು ಸಿಗುತ್ತಿವೆ.

ದಯಾನಂದ್ ಅವರ ಅವಧಿಯಲ್ಲಿ ಅಪರಾಧಗಳ ಸಂಖ್ಯೆ ನಿಯಂತ್ರಣದಲ್ಲಿದೆ. ರೌಡಿಗಳ ಹಾವಳಿ ಸೇರಿದಂತೆ ಸರಕಾರ ತಲೆತಗ್ಗಿಸುವಂತಹ ಯಾವುದೇ ಘಟನೆಗಳು ನಡೆದಿಲ್ಲ. ಸೈಬರ್ ಅಪರಾಧಗಳ ಮೇಲೆ ಕಡಿವಾಣ ಬಿದ್ದಿದೆ. ಹೀಗಿರುವಾಗ ಸುಖಾ ಸುಮ್ಮನೆ ಆಯುಕ್ತರನ್ನು ಬದಲಾವಣೆ ಮಾಡುವುದಾದರೂ ಏಕೆ ಎನ್ನುವ ಪ್ರಶ್ನೆ ಮುಂದಿಟ್ಟುಕೊಂಡು ಸರಕಾರ ವರ್ಗಾವಣೆ ಚಿಂತನೆ ಕೈಬಿಟ್ಟಿದೆ ಎನ್ನಲಾಗಿದೆ.

ಇದರ ಮಧ್ಯೆ ಆಯುಕ್ತರು ಕೂಡ ಮುಂದಿನ ಬಡ್ತಿ ವರೆಗೂ ತಮ್ಮನ್ನು ಮುಂದುವರಿಸುವಂತೆ ಕೇಳಿಕೊಂಡಿದ್ದಾರೆ ಎಂದೂ ಹೇಳಲಾಗಿದೆ. ಹೀಗಾಗಿ ಆಯುಕ್ತರ ಬದಲಾವಣೆ ಪ್ರಸ್ತಾಪ ಸದ್ಯಕ್ಕೆ ಮುಂದೂಡಿದಂತಾಗಿದೆ.

ಹಾಸ್ಟೆಲ್‌ಗಳಿಗೆ ಗುಣಮಟ್ಟದ ಆಹಾರ ಪೂರೈಕೆಗೆ ಪೋರ್ಟಲ್ ಆರಂಭ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರಾಜ್ಯಾದ್ಯಂತ ನಡೆಸುವ ವಸತಿ ನಿಲಯಗಳಿಗೆ ಗುಣಮಟ್ಟದ ಆಹಾರ ಪೂರೈಕೆ ಮತ್ತು ಒದಗಿಸುತ್ತಿರುವ ಆಹಾರದ ಬಗ್ಗೆ ಪ್ರತಿಕ್ರಿಯೆ ಅಥವಾ ದೂರುಗಳನ್ನು ದಾಖಲಿಸಲು ರಾಜ್ಯ ಸರಕಾರ ಪೋರ್ಟಲ್ ಆರಂಭಿಸುವ ನಿರ್ಧಾರವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ವಸತಿ ನಿಲಯಗಳಿಗೆ ಹೊಸದಾಗಿ ಆಹಾರ ಪೂರೈಕೆ ಮಾಡಲು ಕೆಲವು ಷರತ್ತುಗಳನ್ನು ವಿಧಿಸಿ ಪರಿಷ್ಕರಿಸಿರುವ ಟೆಂಡರ್ ಅನ್ನು ಪ್ರಶ್ನಿಸಿ ಕಲಬುರಗಿ, ಬೀದರ್, ರಾಯ ಚೂರು ಮತ್ತು ಯಾದಗಿರಿ ಜಿಲ್ಲೆಗಳ ಶಿವಶಕ್ತಿ ದಾಲ್ ಇಂಡಸ್ಟ್ರೀಸ್ ಮತ್ತು ಟ್ರೇಡರ್ಸ್ ಸೇರಿದಂತೆ ಹಲವು ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಸೂರಜ್ ಗೋವಿಂದರಾಜ್ ಅವ ರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಸರಕಾರ ಉದ್ದೇಶಿಸಿರುವ ಪೋರ್ಟಲ್ ಅಭಿವೃದ್ಧಿಗೆ ಏನೇನು ಕ್ರಮ ಗಳನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಜನವರಿ 30 ರೊಳಗೆ ವಿವರವನ್ನು ನೀಡುವಂತೆ ನಿರ್ದೇಶನ ನೀಡಿ, ವಿಚಾರಣೆ ಯನ್ನು ಮುಂದೂಡಿತು.

ಸರಕಾರ ಸದ್ಯದಲ್ಲೇ ಪೋರ್ಟಲ್ ಆರಂಭಿಸಲಾಗುವುದು, ಅದರಲ್ಲಿ ವಿದ್ಯಾ ರ್ಥಿಗಳು ಸೇರಿದಂತೆ ಸಾರ್ವಜನಿಕರು ಪೂರೈಕೆ ಮಾಡುತ್ತಿರುವ ಆಹಾರ ಸಾಮಗ್ರಿ ಗಳ ಬಗ್ಗೆ ದೂರುಗಳಿದ್ದರೂ ಸಲ್ಲಿಸಬಹುದು, ಅವುಗಳನ್ನು ಪರಿಶೀಲಿಸಿ ಸರಕಾರ ಸೂಕ್ತ ಕ್ರಮ ಜುರಗಿ ಸಲಿದೆ. ಈ ಕುರಿತು ಸಂಬಂಧಿಸಿದ ಅಧಿಕಾರಿ ಗಳು ಆಹಾರ ಗುಣಮಟ್ಟದ ಬಗ್ಗೆ ತಪಾಸಣೆ ನಡೆಸಿದ ಬಳಿಕ ಅದರ ವಿವರಗಳನ್ನು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಿದ್ದಾರೆ. ಒಂದು ವೇಳೆ ತಪಾಸಣೆ ವೇಳೆ ನಿಯಮಗಳ ಉಲ್ಲಂಘನೆ ಕಂಡು ಬಂದರೆ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸರಕಾರ ಹೇಳಿದೆ. ಸರಕಾರದ ಈ ಕ್ರಮ ನ್ಯಾಯ ಸಮ್ಮತವಾಗಿದೆ ಎಂದು ಅಭಿಪ್ರಾಯಪಟ್ಟು, ಅರ್ಜಿಗಳನ್ನು ವಜಾಗೊಳಿಸಿ ಆದೇಶಿಸಿದೆ.

ರಾಜ್ಯ ಸರಕಾರ ಸುಪ್ರೀಂಕೋರ್ಟ್‌ನ ಕೆಲವು ತೀರ್ಪುಗಳನ್ನು ಪರಿಶೀಲಿಸಿದ ಬಳಿಕವೇ ಟೆಂಡರ್‌ನಲ್ಲಿ ಮಾರ್ಪಡು ಮಾಡಿದೆ. ಅದರಂತೆ ತಾಲೂಕುಮಟ್ಟದ ಟೆಂಡರ್ ವ್ಯವಸ್ಥೆಯನ್ನು ಜಿಲ್ಲಾಮಟ್ಟಕ್ಕೆ ವಿಸ್ತರಣೆ ಮಾಡಲಾಗಿದೆ. ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುವ ವಸತಿ ನಿಲಯಗಳಿಗೆ ಆಹಾರ ಸಾಮಗ್ರಿ ಪೂರೈಕೆಗೆ ಪ್ರತ್ಯೇಕ ಟೆಂಡರ್‌ಗಳನ್ನು ಕರೆಯಲಾಗುವುದು ಮತ್ತು ಜಿಲ್ಲಾಮಟ್ಟದಲ್ಲಿಯೇ ಮೇಲ್ವಿಚಾರಣೆ ಮಾಡಲಾಗುವುದು. ಆ ನಿಯಮ ಸಮರ್ಪಕ ವಾಗಿಯೇ ಇದೆ ಎಂದು ಪೀಠ ತಿಳಿಸಿದೆ. ಜತೆಗೆ, ಅರ್ಜಿದಾರರು ಟೆಂಡರ್ ಅವಧಿ ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಳ ಮಾಡಿ ರುವುದನ್ನು ಪ್ರಶ್ನಿಸಿದ್ದಾರೆ. ಆದರೆ, ಇದು ಸರಕಾರದ ನೀತಿ ನಿರ್ಧಾರದ ವಿಚಾರವಾಗಿದ್ದು, ತಜ್ಞರ ಅಭಿಪ್ರಾಯ ಆಧರಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಅದರಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ.

ಪ್ರಕರಣದ ಹಿನ್ನೆಲೆ

ರಾಜ್ಯಾದ್ಯಂತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಸುವ ವಸತಿ ನಿಲಯಗಳಿಗೆ ಕಳಪೆ ಆಹಾರ ಪೂರೈಸಲಾಗುತ್ತಿದೆ ಎಂಬ ವ್ಯಾಪಕ ದೂರುಗಳ ಹಿನ್ನೆಲೆಯಲ್ಲಿ ಸರಕಾರ 2024ರ ಆಗಸ್ಟ್ ತಿಂಗಳಲ್ಲಿ ಟೆಂಡರ್ ನಿಯಮಗಳಲ್ಲಿ ಬದಲಾವಣೆ ಮಾಡಿತ್ತು. ತಾಲೂಕು ಮಟ್ಟದಲ್ಲಿದ್ದ ಟೆಂಡರ್‌ಗಳನ್ನು ಜಿಲ್ಲಾ ಮಟ್ಟಕ್ಕೆ ವಿಸ್ತರಣೆ ಮಾಡಲಾಯಿತು. ಅಂತೆಯೇ ಟೆಂಡರ್ ಅವಧಿಯನ್ನೂ ಸಹ ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಳ ಮಾಡಲಾಗಿತ್ತು. ಇದಕ್ಕೆ ಆಕ್ಷೇಪಿಸಿ ಹಲವು ಟೆಂಡರ್‌ದಾರರು ಹೈಕೋರ್ಟ್ ಮೊರೆ ಹೋಗಿದ್ದರು.

ಪೈಪೋಟಿಗೆ ಬಿದ್ದು ಅದ್ದೂರಿ ಮದುವೆ ಬೇಡ: ಲಲಿತಾ ನಾಯಕ್

ಬೆಂಗಳೂರು: ವಿವಾಹ ಕಾರ್ಯಕ್ರಮಗಳು ಸಾಧ್ಯವಾದಷ್ಟು ಸರಳವಾಗಿ ಮಾಡಿಕೊಳ್ಳಬೇಕು ಎಂದು ಲೇಖಕಿ ಬಿ.ಟಿ. ಲಲಿತಾ ನಾಯಕ್ ಅಭಿಪ್ರಾಯಪಟ್ಟರು.

ಬಂಜಾರ ಭಾಷಾ ಅಕಾಡೆಮಿ ಮತ್ತು ಸರಕಾರಿ ನೌಕರರ ಸಂಘ ಆಯೋಜಿಸಿದ್ದ ಬಂಜಾರ ಮದುವೆ ಶಾಸ್ತ್ರ ವಿಚಾರ ಗೋಷ್ಠಿ ಮತ್ತು ಬಂಜಾರ ಕವಿಗೋಷ್ಠಿಯಲಿ ಮಾತನಾಡಿದ ಅವರು, ಮದುವೆ ಸರಳವಾದಷ್ಟು ಬದುಕು ಸುಂದರವಾಗಿರುತ್ತದೆ ಪೈಪೋಟಿ ಮೇಲೆ ಮದುವೆ ಮಾಡಿ ಸಾಲಕ್ಕೆ ಬಡ್ಡಿ ನೀಡಿ ಬಡತನಕ್ಕೆ ಬೀಳುವ ಅಗತ್ಯವಿಲ್ಲ. ಸಮಾಜಕ್ಕೆ ಬುದ್ಧ ಬಸವ ಅಂಬೇಡ್ಕರ್ ಸೇವಾಲಾಲ್ ಅವರು ತೋರಿದ ಮಾರ್ಗದಲ್ಲಿ ಸಾಗಿದರೆ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತೆ ಎಂದು ಅಭಿಪ್ರಾಯಪಟ್ಟರು.

ಬಂಜಾರ ಇತಿಹಾಸ ಪ್ರಾಚೀನ: ಬಂಜಾರ ಅಕಾಡೆಮಿ ಅಧ್ಯಕ್ಷ ಡಾ. ಎ.ಆರ್ ಗೋವಿಂದ ಸ್ವಾಮಿ ಮಾತನಾಡಿ, ಬಂಜಾರ ಜನಾಂಗದ ಇತಿಹಾಸ ಪ್ರಾಚೀನವಾದದ್ದು. ಕ್ರೈಸ್ತರ ಕಾಲ, ಬುದ್ಧರ ಕಾಲದಿಂದ ಹಿಡಿದು ಇಡೀ ಭಾರತದ ಐನೂರು ಸಂಸ್ಥಾನಗಳೊಂದಿಗೆ ಬೇರೆ ಬೇರೆ ಸಂಪ್ರದಾಯಗಳೊಂದಿಗೆ ಮಿಳಿತವಾಗಿ ರೂಪುಗೊಂಡಿದೆ. ಅಕಾಡೆಮಿಯು ದಸರಾದಲ್ಲಿ ಬಂಜಾರ ಭಾಷಾ ಕವಿಗೋಷ್ಠಿಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಂಜಾರ ಭಾಷಾ ಕವಿಗೋಷ್ಠಿ ನೇರವೇರಿದೆ ಎಂದರು.

ಸಂವಿಧಾನದ ಪರಿಚ್ಛೇದಕ್ಕೆ ಬಂಜಾರ ಭಾಷೆ ಸೇರಿಸಿ: ಈ ಜನಾಂಗದ ಮದುವೆ ಶಾಸ್ತ್ರ ಸ್ಥಳೀಯ ಆಚಾರ ವಿಚಾರಗಳೊಂದಿಗೆ ಮಿಳಿತವಾಗಿ ಹವೇಲಿಯಂತಹ ಸಂಪ್ರದಾಯ ಕಣ್ಮರೆಯಾಗುತ್ತಿವೆ. ಆದ್ದರಿಂದ ಬಂಜಾರ ಭಾಷೆ ಸಾಹಿತ್ಯ ಸಂಸ್ಕೃತಿ ಸಂರಕ್ಷಿಸುವ ನಿಟ್ಟಿನಲ್ಲಿ ಸರಕಾರ ಅಕಾಡೆಮಿ ಸ್ಥಾಪಿಸಿದೆ ನಾವು ನಮ್ಮ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸುವ ಪ್ರಯತ್ನ ಮಾಡಬೇಕಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಐಎಫ್‌ಎಸ್ ಅಧಿಕಾರಿ ಹೀರಾಲಾಲ್, ಮೈಸೂರು ಜಿಲ್ಲಾ ಸಂಘದ ಅಧ್ಯಕ್ಷ ಸುಂದರ್ ಮೇಘಾವತ್, ಕೃಷ್ಣ ನಾಯಕ್ ಸೇರಿದಂತೆ ಅನೇಕರಿದ್ದರು.

ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ನೂತನ ಡೈರಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ಜೆ.ಎಂ.ನಂದಕುಮಾರ್, ಇತರ ಪದಾಧಿಕಾರಿಗಳು ಇದ್ದರು.

ಎಫ್‌ಸಿ ಉದ್ಯಮಿ ಒಕ್ಕಲಿಗ ಎಕ್ಸ್‌ಪೋಗೆ ಯಶಸ್ವಿ ತೆರೆ

ಬೆಂಗಳೂರು: ಮೂರು ದಿನಗಳ ಫಸ್ಟ್ ಸರ್ಕಲ್ -ಉದ್ಯಮಿ ಒಕ್ಕಲಿಗ ಎಕ್ಸ್‌ಪೋ ಭಾನುವಾರ ಯಶಸ್ವಿಯಾಗಿ ಮುಕ್ತಾಯ ಗೊಂಡಿತು. ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಸ್ಪಟಿಕಪುರಿ ಮಠದ ನಂಜಾ ವಧೂತ ಸ್ವಾಮೀಜಿ, ನಾವು ಒಬ್ಬ ಅಧಿಕಾರಿ ಯನ್ನು ಅಭಿವೃದ್ಧಿಪಡಿಸಿದಾಗ ಅವರು ಸ್ವತಃ ಸಂಸ್ಥೆಯಾಗಿ ಲಕ್ಷಾಂತರ ಜನರಿಗೆ ಸಹಾಯ ಮಾಡುತ್ತಾರೆ, ಇದನ್ನು ನಾವು ಡಾ.ಎಚ್.ಎನ್.ಕೃಷ್ಣ ಅವರ ವಿಷಯದಲ್ಲಿ ಕಂಡಿದ್ದೇವೆ. 12,000 ರಿಂದ 13,000 ಅಧಿಕಾರಿಗಳಿಗೆ ಅತ್ಯಂತ ಸಮರ್ಪಕವಾಗಿ ತರಬೇತಿ ನೀಡಿದ್ದಾರೆ. ಎಫ್‌ಸಿ ಎಕ್ಸ್‌ಪೋ ವರ್ಷದಿಂದ ವರ್ಷಕ್ಕೆ ಅಗಾಧವಾಗಿ ಬೆಳೆದಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಅನೇಕ ವಲಯಗಳಿಗೆ ಮಳಿಗೆಗಳನ್ನು ನೀಡುವುದರೊಂದಿಗೆ ಫಸ್ಟ್ ಸರ್ಕಲ್ ಒಕ್ಕಲಿಗ ಸಮುದಾಯಕ್ಕೆ ಬಹು ದೊಡ್ಡ ಅವಕಾಶ ಒದಗಿಸಿದೆ. ಪಿನ್‌ಗಳಿಂದ ಹಿಡಿದು ಯಂತ್ರಗಳವರೆಗೆ, ಕೋಲ್ಡ್ ಪ್ರೆಸ್ಡ್ ಆಯಿಲ್‌ನಿಂದ ಡೈರಿ ತಂತ್ರಜ್ಞಾನದವರೆಗೆ ಮತ್ತು ನಿರ್ಮಾಣದವರೆಗೆ ಎಲ್ಲವನ್ನೂ ಒದಗಿಸುತ್ತಿದೆ ಎಂದರು.

ಶಾಸಕ ಜಿ.ಟಿ. ದೇವೇಗೌಡರು ಮಾತನಾಡಿ, ಪ್ರಸ್ತುತ ಆರ್ಥಿಕವಾಗಿ ಕೃಷಿಕರಿಗೆ ಸವಾಲಿನ ಪರಿಸ್ಥಿತಿಯಲ್ಲಿ, ಕೃಷಿಕರು ಹಾಗೂ ನಮ್ಮ ಅನೇಕ ಉದ್ಯಮಿಗಳು ಕೇವಲ ಉದ್ಯೋಗ ಸೃಷ್ಟಿಕರ್ತರಾಗಿರದೆ ಅಸಂಖ್ಯಾತ ಕುಟುಂಬಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬೆಂಬಲವಾಗಿದ್ದಾರೆ. ಆ ನಿಟ್ಟಿನಲ್ಲಿ ಎಫ್‌ಸಿ-ಉದ್ಯಮಿ ಒಕ್ಕಲಿಗದ ಕಾರ್ಯ ಗಮನಾರ್ಹವಾಗಿದೆ. ಒಕ್ಕಲಿಗ ಉದ್ಯಮಿಗಳ ಸಾಮರ್ಥ್ಯ ವೃದ್ಧಿಯಲ್ಲಿ ಎಫ್ ಸಿ ಉದ್ಯಮಿ ಒಕ್ಕಲಿಗ ಅಭೂತಪೂರ್ವ ವೇದಿಕೆ ಸೃಷ್ಟಿಸಿದೆ.

ನರಸಿಂಹರಾಜಪುರ ಪ್ರಾಥಮಿಕ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನ ಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಿಗೆ 10 ವರ್ಷದ ಬಳಿಕ ಬಹುಮತ ಪಡೆದಿದೆ. ಈ ಚುನಾವಣೆಯ ನೇತೃತ್ವವನ್ನು ವಹಿಸಿದ್ದ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ ಶ್ರೀನಿವಾಸ್ ಅವರಿಗೆ ವಿಜೇತರಿಗೆ ಅಭಿನಂದಿಸಿದರು.

ವಿಜಯನಗರ, ಚೋಳೂರು ಪಾಳ್ಯ ಬಡಾವಣೆಗಳಲ್ಲಿ ಶಾಸಕ ಎಂ ಕೃಷ್ಣಪ್ಪರವರು ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಬಿಬಿಎಂಪಿ ಮಾಜಿ ಸದಸ್ಯ ಚಿಕ್ಕ ತಿಮ್ಮಯ್ಯ, ಎಂ.ಪಿ ಸ್ವಾಮಿ, ಸಿರಾ ಕೃಷ್ಣಪ್ಪ, ಗಿರೀಶ್, ಲಿಂಗರಾಜು ಸೇರಿ ಹಲವರಿದ್ದರು.

ತಲೆಮರೆಸಿಕೊಂಡಿದ್ದ ರೌಡಿ ಬಂಧನ

ಬೆಂಗಳೂರು: ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ರೌಡಿ ಹಾಗೂ ಡ್ರಗ್ಸ್ ಪೆಡ್ಲರ್ ಸೈಯದ್ ಚಾಂದ್ ಪಾಷಾ ಅಲಿಯಾಸ್ ಚಂದುಬಾ ಎಂಬಾತನನ್ನು ಚಾಮರಾಜಪೇಟೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಆರೋಪಿ ವಿರುದ್ಧ ಮಾದಕ ವಸ್ತುಗಳ ಅಕ್ರಮ ಸಾಗಣೆ ತಡೆ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು. 2015ರಿಂದಲೂ ಆರೋಪಿ ಸಹಚರರ ಜತೆಗೆ ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಮಾದಕ ವಸ್ತುಗಳನ್ನು ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದ. ಈತನ ವಿರುದ್ಧ 13 ಪ್ರಕರಣಗಳು ದಾಖಲಾಗಿದ್ದವು. ಜಾಮೀನು ಪಡೆದು ಬಿಡುಗಡೆಯಾದ ಬಳಿಕ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಅಲ್ಲದೇ, ನಗರದ ಪಶ್ಚಿಮ ಹಾಗೂ ದಕ್ಷಿಣ ಭಾಗದ ವ್ಯಾಪ್ತಿಯಲ್ಲಿ ಮತ್ತೆ ಗಾಂಜಾ ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ಆರೋಪಿಯನ್ನು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಇ-ಹರಾಜು ಸೂಚನೆ

ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್

ನೋಂ. ಕಚೇರಿ : ನಂ. 180, 1ನೇ ಮಹಡಿ, 8ನೇ ಕ್ರಾಸ್, 14ನೇ ಮುಖ್ಯ ರಸ್ತೆ 6ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ, ಭಾರತ-560102.
ಲಿಕ್ವಿಡೇಟರ್: ಶ್ರೀ ಅಮರ್‌ಪಾಲ್
ಸಂವಹನ ವಿಳಾಸ: 905, 9ನೇ ಮಹಡಿ, ಬಾರ್ಟನ್ ಸೆಂಟರ್, ಎಂಜಿ ರಸ್ತೆ, ಬೆಂಗಳೂರು, ಕರ್ನಾಟಕ -560001
ಇ-ಮೇಲ್ : cirp.shridiya@gmail.com, ಮೊಬೈಲ್ ಸಂ: 9717105008

ಐಬಿಬಿಐ ಯ ನಿಯಂತ್ರಣ, 2016ರ ನಿಯಂತ್ರಣ 32ಎ ಯ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯ (ಲಿಕ್ವಿಡೇಶನ್ ಪ್ರಕ್ರಿಯೆ) ಅಡಿ ಕಾರ್ಪರೇಟ್ ಸಾಲಗಾರನಾಗಿ ಹೋಗುವ ಕಾಳಜಿಯಿಂದ ಕಂಪನಿಯ ಸ್ವತ್ತುಗಳ ಮಾರಾಟ

ಹರಾಜಿನ ದಿನಾಂಕ ಮತ್ತು ಸಮಯ	06ನೇ ಫೆಬ್ರವರಿ, 2025, ಮಧ್ಯಾಹ್ನ 3:00 ರಿಂದ (ಭಾ.ಕಾ.) ಸಂಜೆ 6:00 ಗಂಟೆ (ಭಾ.ಕಾ.) ಅನಿಯಮಿತ 5 ನಿಮಿಷಗಳ ವಿಸ್ತರಣೆಯೊಂದಿಗೆ)
ಇಎಂಡಿ ಸಲ್ಲಿಕೆಗೆ ಕೊನೆಯ ದಿನಾಂಕ	31 ಜನವರಿ, 2025, ಸಂಜೆ 5:00 (ಭಾ.ಕಾ.) ರವರೆಗೆ
ಅಪೇಕ್ಷಿತ ಬಿಡ್ಡುದಾರರ ಅರ್ಹತಾ ದಾಖಲೆಗಳ ಸಲ್ಲಿಕೆಗೆ ಕೊನೆಯ ದಿನಾಂಕ	20 ಜನವರಿ, 2025, ಸಂಜೆ 5:00 (ಭಾ.ಕಾ.) ಗಂಟೆಗೆ

ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈ. ಲಿ., (ಲಿಕ್ವಿಡೇಶನ್‌ನಲ್ಲಿ) ಸಿಐಎನ್ ನಂ. ಯು70109ಕೆಎ2010ಪಿಟಿಸಿ055085, ಮಾಲೀಕತ್ವದಲ್ಲಿರುವ ಸ್ವತ್ತುಗಳನ್ನು ಲಿಕ್ವಿಡೇಶನ್ ಎಸ್ಟೇಟ್‌ನ ಭಾಗವಾಗಿ ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ಮಂಡಳಿ ಬೆಂಗಳೂರು ಪೀಠವು ತನ್ನ ಆದೇಶ ದಿನಾಂಕ 31.07.2024 (ಸ್ವೀಕೃತವಾದುದು 08.08.2024) ರಂತೆ ಸ್ವತ್ತುಗಳ ಮಾರಾಟ.

ಸ್ವತ್ತುಗಳು	ಮೀಸಲು ಬೆಲೆ	ಇಎಂಡಿ	ಹೆಚ್ಚಳ ಮೌಲ್ಯ
ಯೋಜನೆಯ ಹೆಸರು : ಶ್ರೀ ದಿಯಾ ಆರ್ನೇಟ್ (ಹೋಗುವ ಕಾಳಜಿಯಿಂದ)			
ಶ್ರೀ ದಿಯಾ ಆರ್ನೇಟ್ ಮೂರು ಭಾಗಗಳಾಗಿ ವಿಂಗಡಿತವಾಗಿದೆ. 1. ಸರ್ವೆ ನಂ. 445-ವಿಸ್ತೀರ್ಣ 1 ಎಕರೆ 05 ಗುಂಟೆಗಳು 2. ಸರ್ವೆ ನಂ. 448/1 - ವಿಸ್ತೀರ್ಣ 2 ಗುಂಟೆಗಳು 3. ಸರ್ವೆ ನಂ. 448/1 ವಿಸ್ತೀರ್ಣ 01 ಗುಂಟೆಗಳು ಯೋಜನೆಯ ಸ್ಥಳ : ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು, ಕರ್ನಾಟಕ.	19,44,52,876.80	1,94,45,287.68	1.00 (ಲಕ್ಷಗಳಲ್ಲಿ) ಅಥವಾ ಗುಣಾಕಾರದಲ್ಲಿ

ಇ-ಹರಾಜು ಸೂಚನೆಯ ನಿಯಮ ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ.
1. ಇ-ಹರಾಜನ್ನು "ಎಲ್ಲಿ ಹೇಗಿದೆಯೋ "ಹಾಗಿನ ಆಧಾರದ ಮೇಲೆ" , "ಯಾವುದೇ ಅವಲಂಬನೆ ಇಲ್ಲದೆ" ಅನುಮೋದಿತ ಸೇವಾ ಪೂರೈಕೆದಾರ ಅಂದರೆ https://baanknet.com/ಮೂಲಕ ಮಾರಾಟ ಮಾಡಲಾಗುವುದು.
2. ಈ ನೋಟೀಸನ್ನು ಮಾರಾಟ ಪ್ರಕಟಣೆ ಕನ್‌ಜಂಕ್ಷನ್‌ನೊಂದಿಗೆ ಸಂಪೂರ್ಣ ಇ-ಹರಾಜು ಪ್ರಕ್ರಿಯೆ ದಾಖಲೆಯೊಂದಿಗೆ ಓದಿಕೊಳ್ಳಬೇಕು ಸ್ವತ್ತುಗಳ ವಿವರ, ಆನ್‌ಲೈನ್ ಇ-ಹರಾಜು ಬಿಡ್ ನಮೂನೆ, ಇದರಲ್ಲಿ ಆನ್‌ಲೈನ್ ಇ-ಹರಾಜು ಬಿಡ್ ನಮೂನೆ, ಬಿಡ್ ಘೋಷಣೆ ಮತ್ತು ಒಳಗೊಳ್ಳುವಿಕೆ ಮತ್ತು ಇ-ಹರಾಜಿನ ಸಾಮಾನ್ಯ ನಿಯಮ ಮತ್ತು ನಿಬಂಧನೆಗಳು ಇವುಗಳ ವಿವರಗಳು ವೆಬ್‌ಸೈಟ್ https://www.shridiyacirp.n/ ನಲ್ಲಿ ಲಭ್ಯವಿದೆ. ಮತ್ತು ಸಂಪರ್ಕಿಸಿ: ಶ್ರೀ ಅಮರ್‌ಪಾಲ್ ಇ-ಮೇಲ್ ಐಡಿ : cirp.shridiya@gmail.com ಅಥವಾ 9717105008.
3. ಆಸಕ್ತ ಬಿಡ್ಡುದಾರರು ಸ್ವತ್ತಿನ ಟೈಟಲ್ ಬಗ್ಗೆ ಯಾವುದೇ ರೀತಿಯಿಂದ ತಮ್ಮ ಸ್ವಂತ ವೆಚ್ಚದಲ್ಲಿ ತಮಗೆ ತೃಪ್ತಿಕರವಾಗುವಂತೆ ಸ್ವತಃ ಪರಿಶೀಲನೆ ನಡೆಸಬಹುದು
4. ಆಸಕ್ತ ಬಿಡ್ಡುದಾರರು ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ಯನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ "ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್" ಖಾತೆಯಲ್ಲಿ ಠೇವಣಿಯಾಗಿಡಬೇಕು. ಬ್ಯಾಂಕ್ ಹೆಸರು: ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, ಖಾತಾ ಸಂ. 52105902663, ಐಎಫ್‌ಎಸ್‌ಸಿ ಕೋಡ್ : ಎಸ್‌ಸಿಬಿಎಲ್0036033.
5. ಮೇಲಿನ ಹರಾಜು ಗೌರವಾನ್ವಿತ ಎನ್‌ಸಿಎಲ್‌ಟಿ ಯ ನಿರ್ದೇಶನದಂತೆ ಆದೇಶ ದಿನಾಂಕ 31.07.2024 (ಸ್ವೀಕೃತವಾಗಿರುವುದು 06.08.2024) ನಡೆಸಲಾಗುವುದು.

ಸಹಿ/-
ಶ್ರೀ ಅಮರ್‌ಪಾಲ್
IBBI/IPA-001/IP-P-01584/2018-2019/12411
ಲಿಕ್ವಿಡೇಟರ್, ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈ.ಲಿ.
ಎಎಫ್‌ಎ ಮಾನ್ಯತೆ: 21.11.2024
ಸಂವಹನ ವಿಳಾಸ: 905, 9ನೇ ಮಹಡಿ, ಬಾರ್ಟನ್ ಸೆಂಟರ್, ಎಂಜಿ ರಸ್ತೆ, ಬೆಂಗಳೂರು, ಕರ್ನಾಟಕ -560001
ಇ-ಮೇಲ್ : cirp.shridiya@gmail.com

ಸ್ಥಳ: ನವದೆಹಲಿ
ದಿನಾಂಕ: 06.01.2025

2024ರಲ್ಲಿ ನಗರದಲ್ಲಿ 4,784 ಅಪಘಾತ | ಜೀವ ಕಳೆದುಕೊಂಡ 893 ಮಂದಿ

ರಾಜಧಾನಿಯಲ್ಲಿ ಅಪಘಾತ ಪ್ರಕರಣ ಇಳಿಕೆ

ಬೆಂಗಳೂರು: ಅಪಘಾತಗಳ ಬ್ಲಾಕ್ ಸ್ಪಾಟ್ ಗುರುತಿಸುವಿಕೆ ಹಾಗೂ ಅತಿ ವೇಗ ವಾಹನ ಚಲಾಯಿಸುವವರ ವಿರುದ್ಧ ನಿರಂತರ ಕಾರ್ಯಾಚರಣೆ ಸೇರಿದಂತೆ ಸಂಚಾರ ಪೊಲೀಸರ ಇನ್ನಿತರೆ ಕ್ರಮಗಳಿಂದ 2024 ರಲ್ಲಿ ನಗರದಲ್ಲಿ ಅಪಘಾತಗಳ ಪ್ರಮಾಣ ಇಳಿಕೆಯಾಗಿದೆ. ಜತೆಗೆ, ಪಾದಚಾರಿಗಳ ಸಾವಿನ ಸಂಖ್ಯೆ ಕೂಡ ಗಣನೀಯ ಪ್ರಮಾಣದಲ್ಲಿ ತಗ್ಗಿದೆ.

ನಗರದಲ್ಲಿ ಸಂಭವಿಸಿದ ಅಪಘಾತಗಳ ಪ್ರಮಾಣವನ್ನು ವಿಶ್ಲೇಷಿಸಿದಾಗ ಈ ಅಂಶ ಗೊತ್ತಾಗಿದೆ. 2024ರಲ್ಲಿ ನಗರದಲ್ಲಿ 4,784 ಅಪಘಾತಗಳು ಸಂಭವಿಸಿದ್ದು, 893 ಮಂದಿ ಜೀವ ಕಳೆದುಕೊಂಡಿದ್ದಾರೆ. 2023 ರ ಅಪಘಾತಗಳಿಗೆ ಹೋಲಿಕೆ ಮಾಡಿದಾಗ ಅಪಘಾತಗಳ ಪ್ರಮಾಣ ಶೇ 3.97 ರಷ್ಟು ಕಡಿಮೆಯಾಗಿದೆ. ಈ ಪೈಕಿ ಮಾರಣಾಂತಿಕ ಅಪಘಾತಗಳ ಪ್ರಮಾಣ ಶೇ 1.26 ರಷ್ಟು ಇಳಿಕೆಯಾಗಿದ್ದು, ಸಾವಿನ ಪ್ರಮಾಣವೂ ಶೇ 1.90ಕ್ಕೆ ಕುಸಿದಿದೆ. ನಗರದಲ್ಲಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ಸವಾರರು ಬರೋಬ್ಬರಿ 80.90 ಕೋಟಿ ರು.ದಂಡ ತೆತ್ತಿದ್ದಾರೆ. ಸ್ವಯಂಚಾಲಿತ ಕ್ಯಾಮೆರಾಗಳ ಸಹಾಯದಿಂದ 78,07,399 ಪ್ರಕರಣ, ಸಂಚಾರ ಪೊಲೀಸರು ಖುದ್ದು ಪರಿಶೀಲಿಸಿ 4,79,162 ಪ್ರಕರಣ ದಾಖಲಿಸಿದ್ದರು. ಒಟ್ಟು 82,86,561 ಪ್ರಕರಣಗಳಿಂದ 80,90,76,100 ರು. ದಂಡ ಸಂಗ್ರಹವಾಗಿದೆ ಎಂದು ಪೊಲೀಸರು ವಿವರಿಸಿದ್ದಾರೆ.

ಅಂಗಾಂಗಗಳ ಸಾಗಾಣಿಕೆಗೆ 54 ಗ್ರೀನ್ ಕಾರಿಡಾರ್: ತುರ್ತು ವೈದ್ಯಕೀಯ ಸೌಲಭ್ಯಕ್ಕೆ ಸ್ಪಂದಿಸಿರುವ ಸಂಚಾರ ವಿಭಾಗದ ಪೊಲೀಸರು, ಕಳೆದ ವರ್ಷ ಅಂಗಾಂಗ ಸಾಗಾಣಿಕೆಗೆ 54 ಬಾರಿ ಗ್ರೀನ್ ಕಾರಿಡಾರ್ ವ್ಯವಸ್ಥೆ ಕಲ್ಪಿಸುವ ಮೂಲಕ ಜನರ ಪ್ರಾಣ ಉಳಿಸಲು ನೆರವಾಗಿದ್ದಾರೆ. ಹಿಂದಿನ ಎರಡು ವರ್ಷಗಳಲ್ಲಿ ಕೂಡ 52 ಬಾರಿಗ್ರೀನ್ ಕಾರಿಡಾರ್ ಕಲ್ಪಿಸಲಾಗಿದ್ದು, ಇದರಲ್ಲಿ ಕಳೆದ ವರ್ಷ ಎರಡು ಪಟ್ಟು ಹೆಚ್ಚಾಗಿದೆ. ಕಳೆದ ವರ್ಷ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ಈ ವೇಳೆ 12,54,418 ವಾಹನಗಳ ತಪಾಸಣೆ ನಡೆಸಿ ಕಾನೂನು ಉಲ್ಲಂಘಿಸಿದ 23574 ವಾಹನಗಳ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ಇದರಲ್ಲಿ ಪಾನಮತ್ತರಾಗಿದ್ದ ಶಾಲಾ ಬಸ್‌ಗಳ ಚಾಲಕರ ಮೇಲೆ 201 ಖಾಸಗಿ ಬಸ್‌ಗಳ ಚಾಲಕ ಮೇಲೆ 83 ಹಾಗೂ ವಾಟರ್ ಟ್ಯಾಂಕರ್‌ಗಳ ಚಾಲಕ ಮೇಲೆ 67 ಪ್ರಕರಣ ದಾಖಲಿಸಲಾಗಿದೆ ಎಂದು ವಿವರಿಸಿದ್ದಾರೆ.

ವ್ಹೀಲಿಂಗ್ 456 ಜನರ ಬಂಧನ: ರಸ್ತೆಗಳಲ್ಲಿ ವ್ಹೀಲಿಂಗ್ ಮೂಲಕ ಬೈಕ್‌ಗಳಲ್ಲಿ ಕಸರತ್ತು ನಡೆಸುತ್ತಿದ್ದವರಿಗೆ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ. ಈ ಸಂಬಂಧ 532 ಪ್ರಕರಣಗಳು ದಾಖಲಾಗಿದ್ದು, 520 ವಾಹನಗಳು ಜಪ್ತಿಯಾಗಿವೆ. ಅಲ್ಲದೆ 456 ಮಂದಿಯನ್ನು ಬಂಧಿಸಲಾಗಿದ್ದು, 121 ಅಪಾಪ್ತರ ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ. ತಮ್ಮ ಮಕ್ಕಳಿಗೆ ಬೈಕ್ ನೀಡಿದ ತಪ್ಪಿಗೆ 79 ಪೋಷಕರ ಮೇಲೆ ಪ್ರಕರಣ ದಾಖಲಾಗಿವೆ. ಅಲ್ಲದೆ 146 ವಾಹನ ಪರವಾನಿಗೆ ಹಾಗೂ 246 ಆರ್ ಸಿಗಳು ರದ್ದಾಗಿವೆ. ಹಾಗೆಯೇ ಮದ್ಯ ಸೇವಿಸಿದ 23574 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

5.2 ಲಕ್ಷ ಜನರಿಗೆ ತರಬೇತಿ



ಕಳೆದ ವರ್ಷ ಸಂಚಾರ ನಿಯಮಗಳ ಸಂಬಂಧ 5,20,482 ಜನರಿಗೆ ತರಬೇತಿ ನೀಡಲಾಗಿದೆ. ಅಲ್ಲದೆ ಸಂಚಾರ ನಿರ್ವಹಣಾ ಕೇಂದ್ರಕ್ಕೆ 3992 ಶಾಲೆಗಳ ಮಕ್ಕಳು ಭೇಟಿ ನೀಡಿದ್ದರು ಎಂದು ತಿಳಿಸಿದ್ದಾರೆ. ಕಳೆದ ವರ್ಷ ಸಂಚಾರ ನಿಯಮ ಉಲ್ಲಂಘನೆ ಸಂಬಂಧ 80.90 ಕೋಟಿ ರು. ದಂಡ ಸಂಗ್ರಹ ವಾಗಿದೆ. 2024 ರಲ್ಲಿ ರಸ್ತೆ ಸುರಕ್ಷತೆ ಯನ್ನು ಸುಧಾರಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ಗಳನ್ನು ಕೈಗೊಳ್ಳಲಾಗಿತ್ತು. ಅಪಘಾತ ಹಾಗೂ ಅವುಗಳಿಂದ ಸಾವಿನ ಪ್ರಮಾಣ ಇಳಿಕೆಗೆ ನಿರಂತರ ಪ್ರಯತ್ನಕ್ಕೆ ಫಲಿತಾಂಶ ಸಿಕ್ಕಿದೆ ಎಂದು ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

ಹೊಸ ವರ್ಷದ ಸಂಭ್ರಮದ ಅಮಲಿಗೆ 531 ಪ್ರಕರಣ

ಡಿ.31 ರಂದು ರಾತ್ರಿ ಹೊಸವರ್ಷದ ಸಂಭ್ರಮಾಚರಣೆಯಲ್ಲಿ ಮದ್ಯ ಸೇವಿಸಿ ವಾಹನ ಚಲಾಯಿಸಿದ 531 ಮಂದಿ ಚಾಲಕರು ಸಂಚಾರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ನಗರದಾದ್ಯಂತ ಸಂಚಾರ ಪೊಲೀಸರು ಪಾನಮತ್ತ ಚಾಲಕರ ತಪಾಸಣೆ ನಡೆಸುತ್ತಿದ್ದರು. ಒಟ್ಟು 28,127 ವಾಹನ ಚಾಲಕರನ್ನು ತಪಾಸಣೆಗೆ ಒಳಪಡಿಸಿದ್ದು, ಈ ಪೈಕಿ 531 ಮಂದಿ ಮದ್ಯ ಸೇವಿಸಿರುವುದು ದೃಢಪಟ್ಟಿದ್ದರಿಂದ ಕೇಸ್ ದಾಖಲಿಸಲಾಗಿದೆ. ತಪ್ಪಿತಸ್ಥರು ಕೋರ್ಟ್‌ನಲ್ಲಿ ತಲಾ 10 ಸಾವಿರ ರು. ದಂಡ ಕಟ್ಟಲಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ: 1,825 ಪ್ರಕರಣ ದಾಖಲು

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವ ದ್ವಿಚಕ್ರ ವಾಹನ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ಪಶ್ಚಿಮ ವಿಭಾಗದ ಸಂಚಾರ ಪೊಲೀಸರು, 1,825 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ವಿವಿಧ ಪ್ರಕರಣಗಳಲ್ಲಿ ಒಟ್ಟು 9.30 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬಂದ ಹಾಗೂ ನಿರ್ಬಂಧಿತ ರಸ್ತೆಯಲ್ಲಿ ಸಂಚಾರ ನಡೆಸಿದವರ ವಿರುದ್ಧ 570 ಪ್ರಕರಣ ದಾಖಲಿಸಿಕೊಂಡು, 2.82 ಲಕ್ಷ ದಂಡವನ್ನು ಸಂಚಾರ ವಿಭಾಗದ ಪೊಲೀಸರು ಸಂಗ್ರಹಿಸಿದ್ದಾರೆ. ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿದ್ದವರ ವಿರುದ್ಧ 34 ಪ್ರಕರಣ ದಾಖಲಿಸಿಕೊಂಡು, 20 ಸಾವಿರ ದಂಡ ಹಾಗೂ ಪಾದಚಾರಿ ಮಾರ್ಗದಲ್ಲಿ ವಾಹನ ಚಲಾಯಿಸಿ ನಿಯಮ ಉಲ್ಲಂಘಿಸಿದ್ದ 36 ಮಂದಿಯಿಂದ 18 ಸಾವಿರ ದಂಡ ಸಂಗ್ರಹಿಸಿದ್ದಾರೆ. ನಿಷೇಧಿತ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಿದ್ದ ಚಾಲಕರ ವಿರುದ್ಧ 152 ಪ್ರಕರಣ ದಾಖಲಿಸಿಕೊಂಡು, 91 ಸಾವಿರ ದಂಡ ಸಂಗ್ರಹ ಮಾಡಲಾಗಿದೆ. ಬೇರೆ ಬೇರೆ ರೀತಿಯ ಸಂಚಾರ ನಿಯಮ ಉಲ್ಲಂಘಿಸಿದ 1,033 ಮಂದಿಯಿಂದ 5.18 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.